

# ನಮ್ಮದು ರಂಗಭೂಮಿ ಕುಟುಂಬ

**ಶೋಭಾ ರೈ**

ಉದಯದ 'ಅವಳು ಕಥೆಯಾದವಳು'ವಿನ ಮಯೂರಿ

★ *ಬಣ್ಣಕ್ಕೆ ಬದುಕು ತೆರೆದುಕೊಂಡಿದ್ದು ಹೇಗೆ?*

ಮೂಲತಃ ಮಂಗಳೂರಿನವರು. ನಮ್ಮದು ರಂಗಭೂಮಿ ಕುಟುಂಬ. ನನ್ನ ತಂದೆ ಪಿ.ಬಿ.ರೈ 'ನಂದಕೇಶ್ವರ' ಎಂಬ ನಾಟಕ ಕಂಪನಿಯ ಮಾಲೀಕರಾಗಿದ್ದರು. ನಾನು ಬಾಲ್ಯದಲ್ಲಿಯೇ ನಾಟಕ ಆಡಲು ಶುರುಮಾಡಿದೆ. ನನ್ನ ತಮ್ಮನೂ ನಟ, ಅಮ್ಮನೂ ನಟಿ. ನನ್ನ ನಟನೆ ನಂಟಿಗೆ 20 ವರ್ಷ. ಈಗಲೂ ಪೌರಾಣಿಕ ನಾಟಕಗಳನ್ನು ಆಡುತ್ತೇನೆ. ಸದ್ಯ ಮಂಡ್ಯದಲ್ಲಿ 'ಕುರುಕ್ಷೇತ್ರ' ನಾಟಕವನ್ನು ಆಡಿದ್ದೇವೆ. ನಾನೇ ಒಂದು ಸಾಮಾಜಿಕ ನಾಟಕವನ್ನು ನಿರ್ದೇಶನ ಮಾಡುತ್ತಿದ್ದೇನೆ. ಮೂರು ತಿಂಗಳಲ್ಲಿ ಅದನ್ನು ಆಡುತ್ತೇವೆ. ಧಾರಾವಾಹಿಗಳ ಕಾರಣಕ್ಕೆ ಬೆಂಗಳೂರಿಗೆ ಬಂದಿದ್ದೇನೆ.

★ *ನಾಟಕ– ಧಾರಾವಾಹಿಗಳ ಪಾತ್ರಗಳಲ್ಲಿನ ಅಂತರವೇನು?*

ಧಾರಾವಾಹಿ ಸಂಭಾಷಣೆಯನ್ನು ಚಿತ್ರೀಕರಣದ ಸಂದರ್ಭದಲ್ಲಿಯೇ ಕಲಿತು ಹೇಳಬೇಕು. ಇಲ್ಲಿ ತಪ್ಪನ್ನು ಸರಿಪಡಿಸಿಕೊಳ್ಳಬಹುದಾದ ಅನುಕೂಲ ಇದೆ. ಅನಾನುಕೂಲ ಎಂದರೆ ಕಥೆಯ ಬೇರೆ ಬೇರೆ ಪಾತ್ರಗಳು ಯಾವ ರೀತಿ ಮುಖಾಮುಖಿ ಆಗುತ್ತವೆ ಎನ್ನುವುದು ಗೊತ್ತಾಗುವುದಿಲ್ಲ. ಕೆಲವೊಂದು ಪಾತ್ರಗಳ ಚಿತ್ರೀಕರಣ ಬೇರೆ ದಿನ ನಡೆಯುತ್ತದೆ. ನಾಟಕದಲ್ಲಾದರೆ ದೀರ್ಘ ತಾಲೀಮು ಇರುತ್ತದೆ. ಒಮ್ಮೆ ಒಂದು ನಾಟಕವನ್ನು ಆಡಿದರೆ, ಅದೇ ನಾಟಕವನ್ನು ಎಷ್ಟೇ ಬಾರಿ ಆಡಿದರೂ ಡೈಲಾಗ್ ಬದಲಾಗುವುದಿಲ್ಲ. ರಂಗಭೂಮಿ ಆ ತಕ್ಷಣವೇ ಫಲಿತಾಂಶವನ್ನು ತೋರಿಸುತ್ತದೆ. ನಾಟಕ ಮುಗಿಯುವ ಹೊತ್ತಿಗಾಗಲೇ ಪ್ರೇಕ್ಷಕರು ನಮ್ಮ ಅಭಿನಯದ ಬಗ್ಗೆ ಹೇಳುತ್ತಾರೆ. ಟಿವಿಯಲ್ಲಿ ನಾವೇ ಎಂದು ಗೊತ್ತಾಗುವುದು ತಡವಾಗುತ್ತದೆ.

★ *ಧಾರಾವಾಹಿಯ ಕಥೆಗಳೇಕೆ ದಿಕ್ಕು ತಪ್ಪುತ್ತವೆ?*

ಆ ಬಗ್ಗೆ ನಾನು ಹೇಳಲು ಆಗುವುದಿಲ್ಲ. ಕಥೆ ಹೀಗೇ ಸಾಗುತ್ತದೆ ಎಂದು ನಾನು ನಿರೀಕ್ಷೆನೂ ಮಾಡುವುದಿಲ್ಲ. ಅವತ್ತಿನ ಪಾತ್ರಕ್ಕೆ ನ್ಯಾಯ ನೀಡುವುದಷ್ಟೇ ನನ್ನ ಕೆಲಸ. ನಟಿಯಾಗಿ ಅಭಿನಯವನ್ನೇ ಧ್ಯಾನಿಸುತ್ತೇನೆ. ನಾಟಕದಲ್ಲಿ ಒಟ್ಟಾರೆ ಕಥೆ ಗೊತ್ತಿರುತ್ತದೆ. ಎಲ್ಲರ ಡೈಲಾಗ್ ಕೂಡ ಗೊತ್ತಾಗುತ್ತವೆ. ಧಾರಾವಾಹಿಯಲ್ಲಿ ಅದು ಸಾಧ್ಯ ಆಗುವುದಿಲ್ಲ. ಪಾತ್ರವಾಗಿ ಎಂತಹ ಪಾತ್ರವನ್ನಾದರೂ ಮಾಡಲೇ ಬೇಕು. ಯಾವುದಕ್ಕೂ ತಲೆ ಕೆಡಿಸಿಕೊಳ್ಳಬಾರದು ಎನ್ನುವುದು ನನ್ನ ಆಲೋಚನೆ.

★ *ಮಯೂರಿ ಪ್ರಾತ್ರದ ಪ್ರಾಮುಖ್ಯತೆ ಏನು?*

ಮಯೂರಿ ಪಾತ್ರ ತುಂಬಾ ಖುಷಿ ಕೊಟ್ಟಿದೆ. ನಿಜಕ್ಕೂ ದ್ವೇಷವನ್ನು ಹುಟ್ಟಿಸುವಷ್ಟು ನೆಗೆಟಿವ್ ಗುಣ ಆಕೆಯದು. ಅಭಿನಯಿಸಲು ಸಿಕ್ಕಾಪಟ್ಟೆ ಸವಾಲು ಒಡ್ಡುತ್ತದೆ. ಅದನ್ನು ಪ್ರತಿನಿಧಿಸಲು ಆನಂದ ಆಗುತ್ತದೆ. ತುಂಬಾ ಬಡತನದ ಕುಟುಂಬ ಅವರದು. ಮಯೂರಿಗೆ ಅಕ್ಕ– ತಮ್ಮ ಇರುತ್ತಾರೆ. ತಮ್ಮನ ಆರೈಕೆಯನ್ನು ಮಯೂರಿ ಮಾಡುತ್ತಾಳೆ. ತಮ್ಮ ದೊಡ್ಡವನಾದ ಮೇಲೆ ದೊಡ್ಡ ಶ್ರೀಮಂತನಾಗುತ್ತಾನೆ. ಮಯೂರಿಗೂ ದುರಾಶೆ ಹೆಚ್ಚಾಗುತ್ತದೆ. ಅವನ ಆಸ್ತಿ ಕಬಳಿಸಲು ಸಂಚು ಹೆಣೆಯುತ್ತಾಳೆ. ಅವನ ಹೆಂಡತಿಗೆ ಸಾಕಷ್ಟು ಕಾಟ ಕೊಡುತ್ತಾಳೆ. ತಮ್ಮನ ಎದುರು ನಯವಂಚಕಿಯ ವೇಷ ಧರಿಸುತ್ತಾಳೆ. ಬಾಲ್ಯದಲ್ಲಿ ತಾಯಿಯಂತೆ ಕಂಡ ಅಕ್ಕನ ಬಗ್ಗೆ ಅವನಿಗೆ ಅನುಮಾನ ಬರುವುದಿಲ್ಲ. ತಮ್ಮನ ಮಗುವನ್ನು ಹತ್ಯೆ ಮಾಡಲು ಹೇಳುತ್ತಾಳೆ. ತಮ್ಮನ ಹೆಂಡತಿ ದೊಡ್ಡಕಾಯಿಲೆಗೆ ತುತ್ತಾಗುತ್ತಾಳೆ. ಆಕೆ ರೋಗದಲ್ಲಿ ನರಳುವಾಗ ಕುಟುಂಬದ ಎಲ್ಲಾ ಸಂಗತಿಯನ್ನು ಒಬ್ಬ ಹುಡುಗಿಗೆ ತಿಳಿಸಿ ತನ್ನ ಗಂಡನಿಗೆ ಎರಡನೇ ಮದುವೆ ಮಾಡಿಸಿ ಸಾಯುತ್ತಾಳೆ. ಎರಡನೇ ಹೆಂಡತಿಗೂ ಸಂತಾನ ಆಗದಂತೆ ಕುತಂತ್ರವನ್ನು ಮಯೂರಿ ಹೆಣೆದಿರುತ್ತಾಳೆ. ಕೊನೆಗೆ ತಮ್ಮನ ಕೊಲೆಯ ಸಂಚಿನಲ್ಲಿ ಜೈಲು ಪಾಲಾಗುತ್ತಾಳೆ.

★ *ಹೊಸಹುಡುಗರ ಸವಾಲುಗಳೇನು?*

ಸ್ವತಃ ನಾನೂ ಆರಂಭದಲ್ಲಿ ಕೆಲವೊಂದು ಕಷ್ಟಗಳನ್ನು ಅನುಭವಿಸಿದ್ದೇನೆ. ಏನೇ ಸಮಸ್ಯೆಗಳು ಎದುರಾದರೂ ಅವು ಸಹಜ ಎನ್ನುವ ಅರಿವು ಇರಬೇಕು. ಇಲ್ಲೇ ನೆಲೆ ನಿಲ್ಲುತ್ತೇನೆ ಎನ್ನುವ ಬಯಕೆ ಇರಬೇಕು. ಯಾವುದೇ ಕಷ್ಟಗಳಿಗೆ ಎದೆಗುಂದದೆ ಮುನ್ನಡೆಯುವ ಧೈರ್ಯ ಮೊದಲು ಇರಬೇಕು. ಯಾವುದಕ್ಕೂ ಅಂಜಬಾರದು. ನಮ್ಮ ತಂಡದಲ್ಲಿಯೇ ಹೊಸ ಹುಡುಗರು ಇದ್ದರೆ ಅವರಿಗೆ ನಾವು ಪ್ರೋತ್ಸಾಹಿಸುತ್ತೇವೆ. ಎಷ್ಟೋ ಮಂದಿಗೆ ಅಭಿನಯ ಹೊಸದಿರುತ್ತದೆ. ರಂಗಭೂಮಿಯ ಪರಿಚಯವೂ ಇರುವುದಿಲ್ಲ. ಹೀಗಿರುವಾಗ ಯಾರಾದರೂ ಬೇಸರಪಟ್ಟಿದ್ದರೆ, ಅವರಿಗೆ ನನ್ನ ಉದಾಹರಣೆಯನ್ನೇ ನೀಡುತ್ತೇನೆ. ರಂಗನಟಿಯಾಗಿ ಗುರುತಿಸಿಕೊಂಡಿದ್ದರೂ ಆರಂಭದಲ್ಲಿ ಕಷ್ಟ ನನಗೂ ಇತ್ತು. ನಿಮಗೂ ಅವು ಬಂದಿರಬಹುದು. ಬರುವ ದಿನಗಳು ಚೆನ್ನಾಗಿರುತ್ತವೆ ಎಂದು ಭರವಸೆಯನ್ನು ತುಂಬುತ್ತೇನೆ.

■ **ರಾಘವೇಂದ್ರ**